**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 477/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಕಲೀಮ್ ಪಾಷಾ |
| ತಂದೆಯ ಹೆಸರು | : | ಎಮ್ ಇಬ್ರಾಹಿಮ್ ಖಾನ್ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವ್ಯಾಪಾರ (ಶಾಮಿಯಾನ ಅಗಂಡಿ ನಡೆಸುತ್ತಿದ್ದೇನೆ) |
| ವಾಸಸ್ಥಳ | : | ಅಂತರಸಂತೆ, ಹೆಚ್ ಡಿ ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 22.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ 3 ರವರ ಪರಿಚಯ ಇರುತ್ತದೆ. ಅವರು ನಮ್ಮ ಗ್ರಾಮದವರು ಆಗಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಪೋಲಿಸರು ಠಾಣೆಯಲ್ಲಿ ಒಂದು ದಾಖಲೆಗೆ ಸಹಿ ಮಾಡುವಂತೆ ತಿಳಿಸಿದ್ದರಿಂದ ನಾನು ದಾಖಲೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ಹಸು ಅಥವಾ ವಾಹನ ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ಗುರುತಿಸಿದ ಮೇರೆಗೆ ನಿ.ಪಿ.-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಬಿ)** ಎಂದು ಗುರುತಿಸಲಾಯಿತು. ನಿ.ಪಿ.-1 ರಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುಲ್ಲ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಸಾಕ್ಷಿಗೆ ನಿಪಿ-1 ಅನ್ನು ಓದಿ ಹೇಳಲಾಯಿತು. ದಿನಾಂಕಃ 07.08.2023 ರಂದು ಸಂಜೆ 5.50 ಗಂಟೆ ಸಮಯದಲ್ಲಿ ನಾನು ಹಾಗು ನನ್ನ ಸ್ನೇಹಿತನಾದ ಚಾಸಾ 3 ರವರು ಕೆಲಸದ ಸಂಬಂಧ ಹೆಚ್ ಡಿ ಕೋಟೆಯ ಹ್ಯಾಂಡ್ ಪೋಸ್ಟ್ ಸರ್ಕಲ್ ನಲ್ಲಿದ್ದಾಗ ಹೆಚ್ ಡಿ ಕೋಟೆ ಪೋಲಿಸ್ ಠಾಣೆಯ ಪಿ ಎಸ್ ಐ ಆದಂತಹ ಚಾಸಾ 1 ರವರು ನಮಗೆ ಕರೆ ಮಾಡಿ ಹ್ಯಾಂಡ್

ಪೋಸ್ಟ್‌ನಲ್ಲಿ ರುವ ಅಶೋಕ ಪೆಟ್ರೋಲ್ ಬಂಕ್ ಬಳಿ ಬರುವಂತೆ ತಿಳಿಸಿದ್ದು ಆ ಪ್ರಕಾರ ನಾನು ಹಾಗೂ ಚಾಸಾ 3 ರವರು ಸದರಿ ಪೆಟ್ರೋಲ್ ಬಂಕ್ ಬಳಿ ಹೋಗಿರುತ್ತೇವೆಂದರೆ ಸರಿಯಲ್ಲ. ಅಲ್ಲಿ ಚಾಸಾ 1 ರವರು ನನಗೆ ಹಾಗೂ ಚಾಸಾ 3 ರವರಿಗೆ ಬಾತ್ಮಿದಾರರು ತಿಳಿಸಿದ ಮಾಹಿತಿಯ ವಿಚಾರ ಹಾಗೂ ನಂತರದ ಕ್ರಮದ ಬಗ್ಗೆ ತಿಳಿಸಿ ಅಮಾನತ್ತು ಮಹಜರ್ ನ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರು ನಮ್ಮ ಸಮಕ್ಷಮ ಕೆಎ 45 ಎ 2302 ನೋಂದಣಿ ಸಂಖ್ಯೆಯ ಆಟೋವನ್ನು ಪರಿಶೀಲಿಸಲಾಗಿ ಸದರಿ ಆಟೋದಲ್ಲಿ ಕಪ್ಪು ಮತ್ತು ಬಿಳಿ ಮಿಶ್ರಿತ 01 ಇಲಾತಿ ಹಸು, ಕಂದು ಬಣ್ಣದ 01 ಇಲಾತಿ ಹಸು ಮತ್ತು ಬಿಳಿ ಬಣ್ಣದ 01 ಇಲಾತಿ ಹಸು ಇರುವುದು ಕಂಡು ಬಂದಿದ್ದು ನಂತರ ಚಾಸಾ1 ರವರ ನಮ್ಮ ಸಮಕ್ಷಮ ಸಂಜೆ 06.00-07.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ 03 ದನಗಳನ್ನು ಹಾಗು ಅವುಗಳನ್ನು ಸಾಗಿಸಲು ಬಳಸಿದ ಕೆಎ 45 ಎ 2302 ನೋಂದಣಿ ಸಂಖ್ಯೆಯ ಟಾಟಾ ಏಸ್ ಆಟೋವನ್ನು ಅಮಾನತ್ತುಪಡಿಸಿಕೊಂಡಿತ್ತಾರೆ ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಪ್ರಕರಣ ದಾಖಲಾಗಿದ್ದು ದಿನಾಂಕ 08.08.2023 ರಂದು ಪೋಲೀಸರ ಮುಂದೆ "ನಿನ್ನೆ ದಿನ ದಿನಾಂಕ 07.08.2023 ರಂದು ------------------------ ಮತ್ತೆ ನೋಡಿದರೆ ಗುರುತಿಸುತ್ತೇನೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು **ನಿ.ಪಿ.-6** ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-3 ಹಾಗೂ 4 ರ ಫೋಟೋಗಳನ್ನು ತೋರಿಸಿ ಸದರಿ ಫೋಟೋಗಳಲ್ಲಿ ತಮ್ಮ ಭಾವಚಿತ್ರ ಇದೆ ಎಂದು ಸೂಚಿಸಲಾಗಿ ಪೋಲಿಸರು ಫೋಟೋ ತೆಗೆಯುವ ಸಮಯದಲ್ಲಿ ನಿಲ್ಲಲು ತಿಳಿಸಿದ್ದರಿಂದ ನಿಂತಿರುತ್ತೇನೆಂದು ನುಡಿಯುತ್ತಾರೆ. ಮೇಲೆ ಹೇಳಿದಂತೆ ಪ್ರಕರಣದ ಎಲ್ಲ ವಿಚಾರಗಳು ಗೊತ್ತಿದ್ದು ನಿಪಿ-1 ರಂತೆ ಮಹಜರ್ ಕ್ರಮ ಜರುಗಿಸುವಾಗ ಸ್ಥಳದಲ್ಲಿರುವ ಅದರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿದ್ದರೂ ಸಹ ಆರೋಪಿಗಳಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**<u>ಮರು ವಿಚಾರಣೆಃ ಇರುವುದಿಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**